ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಾನ್ಯ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 28.12.2023 ರಂದು ಮಧ್ಯಾಹ್ನ 3.00 ಗಂಟೆಗೆ ನಡೆದ ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ಸರಬರಾಜು ಮಾಡಲು ಕರೆದಿರುವ ಟೆಂಡರ್‌ನ ಫ್ರೀ ಬಿಡ್ ಸಭೆಯ ನಡವಳಿಗಳು

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:-

1 ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ, ಬೃ.ಬೆಂ.ಮ.ಪಾಲಿಕೆ.
2 ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನಾ ವಿಭಾಗ.
3 ಸಹಾಯಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನಾ ವಿಭಾಗ.
4 ಮೆ॥ ರಿವಾಡ್ಸ್ ಸಂಸ್ಥೆಯ ಪ್ರತಿನಿಧಿ ಶ್ರೀ ಶಶಿಕುಮಾರ್
5 ಮೆ॥ ರಿವಾಡ್ಸ್ ಸಂಸ್ಥೆಯ ಪ್ರತಿನಿಧಿ ಶ್ರೀ ಪ್ರಕಾಶ್
6 ಮೆ॥ ಶೆಫ್‌ಟಾಕ್ ಫುಡ್ ಅಂಡ್ ಹಾಸ್‌ಫಿಟಾಲಿಟಿ ಪ್ರೈವೈಟ್ ಲಿಮಿಟೆಡ್ ಸಂಸ್ಥೆಯ ಪ್ರತಿನಿಧಿ ಶ್ರೀ ಹರಿಶ್ ಪೂಜಾರಿ
7 ಮೆ॥ ಶೆಫ್‌ಟಾಕ್ ಫುಡ್ ಅಂಡ್ ಹಾಸ್‌ಫಿಟಾಲಿಟಿ ಪ್ರೈವೈಟ್ ಲಿಮಿಟೆಡ್ ಸಂಸ್ಥೆಯ ಪ್ರತಿನಿಧಿ ಶ್ರೀ ಚೇತನ್

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನಾ ವಿಭಾಗರವರು ಸಭೆಯಲ್ಲಿ ಹಾಜರಿದ್ದ ಗುತ್ತಿಗೆದಾರರನ್ನು ಪರಿಚಯಿಸಿಕೊಂಡು ಸಭೆಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಕಾರ್ಯಪಾಲಕ ಅಭಿಯಂತರರು, ಟೆಂಡರ್ ದಾಸ್ತಾವೇಜಿನ ಮುಖ್ಯಾಂಶಗಳನ್ನು ಸಭೆಗೆ ಓದಿ ತಿಳಿಸಿದರು ಮತ್ತು ದಿನಾಂಕ: 28.12.2023 ರಂದು ಮಧ್ಯಾಹ್ನ 3.00 ಗಂಟೆಗೆ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿದ್ದು, ಟೆಂಡರ್ ದಾಸ್ತಾವೇಜಿಗೆ ಸಂಬಧಿಸಿದ ಯಾವುದೇ ಪ್ರಶ್ನೆಗಳನ್ನು ದಿನಾಂಕ: 27.12.2023 ರಂದು ಸಂಜೆ 5.30 ಗಂಟೆ ಒಳಗಾಗಿ ಈ-ಪೊರ್ಟಲ್‌ನಲ್ಲಿ ಅಪ್ಲೋಡ್ ಮಾಡಲು ಸೂಚಿಸಲಾಗಿತ್ತು. ಪೂರ್ವಭಾವಿ ಸಭೆಯ ಪ್ರಾರಂಭಕ್ಕೆ ಮುನ್ನ ಈ-ಪೊರ್ಟಲ್‌ನಲ್ಲಿ ಪರಿಶೀಲಿಸಲಾಗಿ ಯಾವುದೇ ಪ್ರಶ್ನಾವಳಿಗಳು ಅಪ್ಲೋಡ್ ಮಾಡದೆ ಇರುವುದು ಕಂಡು ಬಂದಿರುತ್ತದೆ.

ಸಭೆಯಲ್ಲಿ ಹಾಜರಿದ್ದ ಮೆ॥ ರಿವಾಡ್ಸ್ ಸಂಸ್ಥೆಯ ಪ್ರತಿನಿಧಿಯಾದ ಶ್ರೀ ಶಶಿಕುಮಾರ್ ಮತ್ತು ಶ್ರೀ ಪ್ರಕಾಶ್ ರವರು ಮಾತನಾಡಿ ದಸ್ತಾವೇಜಿನ ಕಾಲಂ ಸಂಖ್ಯೆ: 3:4 ಉಪ ಕಾಲಂ 17 ರಲ್ಲಿ Liquid assets and or availability of credit facilities of not less than Rs. 933.90 lakhs (Credit lines/ Letters of Credit/ Certificates from Banks) for meeting the fund requirement in the above said name of work. ಎಂದು ನಮೂದಿಸಲಾಗಿದ್ದು ಸದರಿ ಮೊತ್ತವು ಹೆಚ್ಚುವರೆಯಾಗುವುದರಿಂದ ಈ ಮೊತ್ತವನ್ನು ರೂ.200.00 ರಿಂದ ರೂ.300.00 ಲಕ್ಷಗಳಿಗೆ ಮಿತಗೊಳಿಸುವಂತೆ ಕೋರಿದರು,

ಕಾರ್ಯಪಾಲಕ ಅಭಿಯಂತರರು ಬೊಮ್ಮನಹಳ್ಳಿ ಯೋಜನಾ ವಿಭಾಗರವರು ಮಾತನಾಡಿ ಸದರಿ ಕಾಮಗಾರಿಯ ಅವಧಿಯು 2 ವರ್ಷಗಳಾಗಿದ್ದು, ಆದುದರಿಂದ ಅಂದಾಜು ಮೊತ್ತವನ್ನು 1 ವರ್ಷಕ್ಕೆ ಪರಿಗಣಿಸಿ ಶೇಕಡಾ 30% ರಷ್ಟು ಅಂದರೆ ರೂ.467.00 ಲಕ್ಷಗಳಿಗೆ (Credit lines/ Letters of Credit/ Certificates from Banks) ಪಡೆದು ಸಲ್ಲಿಸುವಂತೆ ಹಾಜರಾಗಿದ್ದ ಬಿಡ್‌ದಾರರಿಗೆ ಸೂಚಿಸಲಾಗಿರುತ್ತದೆ. ಇದನ್ನು ಹೊರತು ಪಡಿಸಿ, ಯಾವುದೇ ಬದಲಾವಣೆಗಳು ಇರುವುದಿಲ್ಲವೆಂದು ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಮೆ॥ ಶೆಫ್‌ಟಾಕ್ ಫುಡ್ ಅಂಡ್ ಹಾಸ್‌ಪಿಟಾಲಿಟಿ ಪ್ರೈವೈಟ್ ಲಿಮಿಟೆಡ್ ರವರ ಪ್ರತಿನಿಧಿಯಾದ ಶ್ರೀ ಹರಿಶ್ ಪೂಜಾರಿ ಮತ್ತು ಶ್ರೀ ಚೇತನ್ ರವರು ಮಾತನಾಡಿ 2.6.1 The money collected by the beneficiaries should be deposited to the service provider's account on daily basis, the account deposit details should be provided to the client along with the bills, every month. ಎಂದು ನಮೂದಿಸಲಾಗಿದ್ದು ಹಣವನ್ನು ದಿನ ನಿತ್ಯ ಬ್ಯಾಂಕಿನಲ್ಲಿ ಪಾವತಿಸುವುದರ ಬದಲಿಗೆ ದಿನ ನಿತ್ಯದ ಖರ್ಚುಗಳಿಗೆ ಬಳಸಲಾಗುವುದರಿಂದ ಪ್ರತಿ ದಿನ ಬ್ಯಾಂಕ್ ಖಾತೆಗೆ ಪಾವತಿಸಬೇಕೆಂದು ಮಾಡಿರುವ ನಿಯಮವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು ಬೊಮ್ಮನಹಳ್ಳಿ ಯೋಜನಾ ವಿಭಾಗರವರು ಮಾತನಾಡಿ ಮಾನ್ಯ ಮುಖ್ಯ ಆಯುಕ್ತರವರಿಂದ ಟೆಂಡರ್ ದಾಸ್ತಾವೇಜು ಅನುಮೋದನೆಗೊಂಡಿರುತ್ತದೆ. ಇದರಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲವೆಂದು ತಿಳಿಸಿದರು ಅಲ್ಲದೆ ಟೆಂಡರ್ ದಸ್ತಾವೇಜಿನಲ್ಲಿ Documents required by the bidders 2. GST registration certificate. 7. Labour Department registration certificate. 9. Certificate of Incorporation in case of Private Limited / Public Limited ಬಿಡ್‌ದಾರರು ಸಲ್ಲಿಸುವ ಪಟ್ಟಿಯಲ್ಲಿ ಕ್ರಮ ಸಂಖ್ಯೆ: 2,7 ಮತ್ತು 9 ರಲ್ಲಿ ನಮೂದಾಗಿರುವ No ಬದಲಾಗಿ Yes ಎಂದು ಓದಿಕೊಳ್ಳತಕ್ಕದ್ದು ಇದನ್ನು ಹೊರತು ಪಡಿಸಿ, ಬೇರೆ ಯಾವುದೇ ಬದಲಾವಣೆಗಳು ಇರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು ಮತ್ತು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯಪಾಲಕ ~~ಅಭಿಯಂತರರು~~,
ಬೊಮ್ಮನಹಳ್ಳಿ ಯೋಜನಾ ವಿಭಾಗ. 1-1-2024